# ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆ (ರಿ)

**ಸಿರಿಗೆರೆ - 577 541 ಚಿತ್ರದುರ್ಗ ಜಿಲ್ಲೆ**

**No.C5/1618/2012** **www.taralabalu.net** **ದಿನಾಂಕ 20-2-2012**

## ಪ್ರೌಢಶಾಲಾ ಶಿಕ್ಷಕರ ನೇಮಕಾತಿ ಪ್ರಕಟಣೆ

ನಮ್ಮ ವಿದ್ಯಾಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಅನುದಾನಿತ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಕೆಳಕಂಡ ಶಿಕ್ಷಕರ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿದೆ. ಇಲಾಖೆಯಿಂದ ಪಡೆದ ಅನುಮೋದನಾ ಪತ್ರ ಸಂಖ್ಯೆ ಸಿ8(7)(5)ಶಾಶಿಅ.ಹುಭಅ. 4/2೦08-09 ದಿನಾಂಕ 31.12.2009 ಮತ್ತು 23.2.2010.

**Asst Masters/PE Teachers**

| Subjects | Arts | CBZ | PCM | Kannada | Hindi | PE | Total |
|---|---|---|---|---|---|---|---|
| Vacancies | 21 | 6 | 13 | 10 | 9 | 7 | 66 |

**Vertical/Horizontal Reservation (Asst Masters)**

| Category | Woman | Rural | Kan Med | Handicap | Ex.Soldier | Nirashrita | General | Total |
|---|---|---|---|---|---|---|---|---|
| SC | 2 | 2 | 1 | | 1 | | 2 | 8 |
| ST | | 1 | | | | | 1 | 2 |
| I | | 1 | | 1 | | | 1 | 3 |
| II A | 3 | 2 | 1 | | 1 | | 2 | 9 |
| II B | | 1 | | 1 | | | | 2 |
| III A | | 1 | | 1 | | | | 2 |
| III B | 1 | 1 | | 1 | | | | 3 |
| GM | 9 | 8 | 1 | 2 | 3 | 1 | 6 | 30 |
| | | | | | | | Total | 59 |

**Vertical/Horizontal Reservation (PE Teachers)**

SC (Rural) = 1, I (Rural) = 1, IIA (Woman) = 1, IIA (Rural) = 1,
GM (Woman) = 1, GM (Rural) = 1, GM (General) = 1 **Total = 7**

## ಸೂಚನೆಗಳು

1. **ವಿದ್ಯಾರ್ಹತೆ:** ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಪದವಿ ಮತ್ತು ಶಿಕ್ಷಕ ತರಬೇತಿ / ತತ್ಸಮಾನ ವಿದ್ಯಾರ್ಹತೆ ಪಡೆದಿರಬೇಕು. ದೈಹಿಕ ಶಿಕ್ಷಕ ಅಭ್ಯರ್ಥಿಗಳು ಅಂಗೀಕೃತ ವಿಶ್ವವಿದ್ಯಾನಿಲಯದ ಪದವಿ ಜೊತೆಗೆ ಬಿ.ಪಿ.ಇಡಿ., ಪದವಿ ಪಡೆದಿರಬೇಕು.
2. **ನೇಮಕಾತಿ ವಿಧಾನ, ಮೀಸಲಾತಿ, ವಯೋಮಿತಿ, ವೇತನಶ್ರೇಣಿ:** ಇಲಾಖೆಯ ನಿಯಮಗಳನ್ನು ಅನುಸರಿಸಲಾಗುವುದು.
3. **ಅರ್ಜಿ ಶುಲ್ಕ:** ರೂ. 250/-, (ಎಸ್.ಸಿ., ಎಸ್.ಟಿ., ಮತ್ತು ಪ್ರವರ್ಗ 1 ರ ಅಭ್ಯರ್ಥಿಗಳಿಗೆ ಮಾತ್ರ ರೂ.150/-.) ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ "S.T.J. Education Society, Sirigere, Chitradurga Dist" ಈ ಹೆಸರಿಗೆ ಪಡೆದ ಡಿ.ಡಿ.ಯನ್ನು ಸಲ್ಲಿಸಿ ನಿಗದಿತ ಅರ್ಜಿ ಫಾರಂನ್ನು ಈ ಕಛೇರಿಯಿಂದ ಖುದ್ದಾಗಿಯಾಗಲೀ ಅಥವಾ ರೂ. 10/- ಅಂಚೆ ಚೀಟಿ ಹಚ್ಚಿದ ಸ್ವಂತ ವಿಳಾಸದ ಲಕೋಟೆಯನ್ನು ಕಳುಹಿಸಿ ಅಂಚೆ ಮೂಲಕವಾಗಲೀ ಪಡೆಯಬಹುದು.
4. **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ಭರ್ತಿ ಮಾಡಿದ ಅರ್ಜಿಯನ್ನು ಎಲ್ಲಾ ಮೂಲ ದಾಖಲಾತಿಗಳ ಜೆರಾಕ್ಸ್ ಪ್ರತಿಗಳೊಂದಿಗೆ ದಿ. 12-3-2012 ರ ಒಳಗಾಗಿ **ಆಡಳಿತಾಧಿಕಾರಿಗಳು, ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆ (ರಿ), ಸಿರಿಗೆರೆ - 577541, ಚಿತ್ರದುರ್ಗ ಜಿಲ್ಲೆ** ಈ ವಿಳಾಸಕ್ಕೆ ತಲುಪುವಂತೆ ಕಳುಹಿಸುವುದು. ಅಲ್ಲದೆ ಅರ್ಜಿಯ ಜೆರಾಕ್ಸ್ ಪ್ರತಿಯನ್ನು ಮಾನ್ಯ ನಿರ್ದೇಶಕರು (ಪ್ರೌಢ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು - 560001 ಈ ವಿಳಾಸಕ್ಕೆ ಕಳುಹಿಸುವುದು.
5. ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಎಲ್ಲಾ ಪರೀಕ್ಷೆಗಳ ಅಂಕಪಟ್ಟಿಗಳ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸುವುದು.
6. ಮೀಸಲಾತಿ ಸೌಲಭ್ಯವನ್ನು ಪಡೆಯ ಬಯಸುವವರು ಸರ್ಕಾರದ ಮೀಸಲಾತಿ ಆದೇಶದನ್ವಯ ಎಲ್ಲಾ ಘೋಷಣಾ/ಪ್ರಮಾಣ ಪತ್ರಗಳ ಜೆರಾಕ್ಸ್ ಪ್ರತಿಗಳನ್ನು ತಪ್ಪದೇ ಲಗತ್ತಿಸುವುದು.
7. ಮೇಲಿನ ನೇಮಕಾತಿಗಳು ಸರ್ಕಾರ/ಇಲಾಖೆಯು ಕಾಲಕಾಲಕ್ಕೆ ಹೊರಡಿಸುವ ಆದೇಶಗಳು/ಇಲಾಖಾ ಅನುಮೋದನೆಯ ಷರತ್ತುಗಳಿಗೆ ಮತ್ತು ತಿದ್ದುಪಡಿಗೆ ಒಳಪಟ್ಟಿರುತ್ತವೆ.
8. ಅಪೂರ್ಣ ಮಾಹಿತಿ ಹಾಗೂ ಸಂಬಂಧಿಸಿದ ಪ್ರಮಾಣ ಪತ್ರಗಳು ಇಲ್ಲದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
9. ದಾಖಲೆಗಳ **ಎಲ್ಲಾ** ಮೂಲ ಪ್ರತಿಗಳನ್ನು ಸಂದರ್ಶನದ ವೇಳೆಯಲ್ಲಿ ತಪ್ಪದೇ ಹಾಜರುಪಡಿಸುವುದು.
10. **ಸಂದರ್ಶನ ನಡೆಯುವ ಸ್ಥಳ:** ಮಾಕನೂರು ಮಲ್ಲೇಶಪ್ಪ ಶಿಕ್ಷಣ ಕಾಲೇಜು, ಅನುಭವಮಂಟಪ, ದಾವಣಗೆರೆ - 577 004.
11. **ಈ ಕೆಳಗಿನ ದಿನಾಂಕಗಳಂದು ಬೆಳಿಗ್ಗೆ 10.30 ಘಂಟೆಗೆ, ಅಭ್ಯರ್ಥಿಗಳು ಸ್ವಂತ ಖರ್ಚಿನಲ್ಲಿ ಸಂದರ್ಶನಕ್ಕೆ ಹಾಜರಾಗುವುದು.**

| | |
|---|---|
| ಕಲಾ ಶಿಕ್ಷಕರು | 17-3-2012 |
| ಸಿಬಿಜಡ್ ಶಿಕ್ಷಕರು | 17-3-2012 |
| ಪಿಸಿಎಂ ಶಿಕ್ಷಕರು | 17-3-2012 |

| | |
|---|---|
| ಕನ್ನಡ ಶಿಕ್ಷಕರು | 18-3-2012 |
| ಹಿಂದೀ ಶಿಕ್ಷಕರು | 18-3-2012 |
| ದೈಹಿಕ ಶಿಕ್ಷಕರು | 18-3-2012 |

**(ಎಸ್.ಬಿ. ರಂಗನಾಥ್)**
ಆಡಳಿತಾಧಿಕಾರಿಗಳು

**(ಕೆ. ಕೆಂಚಪ್ಪ)**
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು